## ಹೆಚ್ಚುವರಿ ಸಿವಿಲ್ ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಯಾದಗಿರಿ.

**ಸಿ.ಸಿ. ನಂಃ 1846/2024**

**ಉಪಸ್ಥಿತರುಃ- ಶ್ರೀ ರಾಹುಲ ರಾವ್ ಬಿ.ಎ.ಎಲ್.ಎಲ್.ಬಿ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು ಯಾದಗಿರಿ, ಈ ಕೆಳಗಿನ ಆರೋಪಿ.**

**ಫಿರ್ಯಾಧಿದಾರರುಃ ಕರ್ನಾಟಕ ಸರ್ಕಾರದ ಪರವಾಗಿ ಸೈದಾಪೂರ ಪೋಲಿಸ ಠಾಣೆ**

**// ವಿರುದ್ಧ //**

**ಆರೋಪಿತರು : ಮೇತ್ರಿ ಸಂತೋಷ**

| | |
|---|---|
| **ಆರೋಪಿತರುಃ 1.** | ಮೇತ್ರಿ ಸಂತೋಷ ತಂದೆ ತಾಯಪ್ಪ,<br>ಸಾಃ ಕಡೇಚೂರು ಗ್ರಾಮ,<br>ತಾಃ ಮತ್ತು ಜಿಃ ಯಾದಗಿರಿ. |

### ಆಪಾದನೆಯ ಸಾರಾಂಶ

ದಿನಾಂಕಃ 05-06-2024 ರಂದು ರಾಃ 09-10 ಸೈದಾಪೂರ ಪೋಲಿಸ ಠಾಣಾ ವ್ಯಾಪ್ತಿಯಲ್ಲಿ ಬರುವ ಕಡೇಚೂರು ಗ್ರಾಮದ ಹರಿಜನವಾಡದ ಆಂಜನೇಯ ದೇವಸ್ಥಾನದ ಮುಂದುಗಡೆ ಮೇಲೆ ಆರೋಪಿಯಾದ ನೀನು ನಿನ್ನ ಕಾರ್ ವಾಹನ ಸಂಖ್ಯೆ ನಂ. ಕೆಎ-33-ಎಂ-4533 ನೇದ್ದನ್ನು ಅತಿವೇಗ ಮತ್ತು ಅಲಕ್ಷ್ಯತದಿಂದ ನಡೆಸಿಕೊಂಡು ಹೋಗಿ ನಿಯಂತ್ರಿಸದೆ ಕಡೇಚೂರುಕ್ರಾಸ್-ಜಿಲ್ಲಾ ಮುಖ್ಯ ರಸ್ತೆಯ ಮೇಲೆ ಚಾಸಾಃ1 ರವರಿಗೆ ಡಿಕ್ಕಿಪಡಿಸಿದ್ದು, ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 279 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

2. ಈ ಮೇಲೆ ಹೇಳಿದ ದಿನಾಂಕ, ಸಮಯ ಸ್ಥಳ ಮತ್ತು ಸಂದರ್ಭದಲ್ಲಿ ಆರೋಪಿಯಾದ ನೀನು ನಿನ್ನ ಕಾರನ್ನು ಅತಿವೇಗ ಮತ್ತು ಅಲಕ್ಷ್ಯತದಿಂದ ನಡೆಸಿ ಡಿಕ್ಕಿಪಡಿಸಿದ್ದರಿಂದ ಚಾಸಾಃ1 ರವರಿಗೆ ಬಲಗಾಲು ಮೂಳೆ ಮುರಿದ್ದು ಗಂಭೀರ ಸ್ವರೂಪದ ಗಾಯವಾಗಿದ್ದು, ಈ ಮೂಲಕ ಭಾರತೀಯ

ದಂಡ ಸಂಹಿತೆ ಕಲಂ 338 ರ ಅಡಿಯಲ್ಲಿ  ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

**3.** ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ಕಡೇಚೂರು ಗ್ರಾಮದ ಹರಿಜನವಾಡದ ಆಂಜನೇಯ ದೇವಸ್ಥಾನದ ಮುಂದುಗಡೆ ಮೇಲೆ ಆರೋಪಿಯಾದ ನೀನು ನಿನ್ನ ಕಾರ್ ಚಲಾಯಿಸಿಕೊಂಡು ಹೋಗುತ್ತಿರುವಾಗ ಅತಿವೇಗ ಮತ್ತು ಅಲಕ್ಷತನಿದಿಂದ ನಡೆಸಿಕೊಂಡು ಅಪಘಾತವಾದ ನಂತರ ಕಾರ್ ಚಾಲಕನು ಕ್ಷತಿಗೀಡಾದ ವ್ಯಕ್ತಿಯ ಯೋಗಕ್ಷೇಮವನ್ನು ವಿಚಾರಿಸದೆ ವಾಹನವನ್ನು ಸ್ಥಳದಲ್ಲಿಯೇ ಬಿಟ್ಟು ಓಡಿ ಹೋಗಿದ್ದು, ಈ ಮೂಲಕ ಆರೋಪಿಯಾದ ನೀನು ಮೋ.ವಾ ಕಾಯ್ದೆ.187 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

(ಮೇಲ್ಕಾಣಿಸಿದ ಆಪಾದನೆ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಲಾಯಿತು.)

ದಿನಾಂಕ 19-07-2025

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ.ಗಳು, ಯಾದಗಿರಿ.**